ವಿಶ್ವವಾಣಿ

ಸಂಪಾದಕೀಯ

ಉಗ್ರರ ನಿಗ್ರಹಕ್ಕೆ ಇನ್ನಷ್ಟು ಕಠಿಣ ಕ್ರಮ ಅಗತ್ಯ

ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಸೇನಾವಾಹನದ ಮೇಲೆ ಸೋಮವಾರ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ನಾಲ್ವರು ಯೋಧರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಕಳೆದ ನಾಲ್ಕು ವಾರಗಳಲ್ಲಿ ಕಥುವಾದಲ್ಲಿ ನಡೆದ ಎರಡನೇ ಭಯೋತ್ಪಾದಕ ದಾಳಿ ಇದಾಗಿದ್ದು, ಜೂನ್ 12 ಮತ್ತು 13ರಂದು ಸೇನಾ ಕಾರ್ಯಾಚರಣೆ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ಸಿಆರ್‌ಪಿಎಫ್ ಯೋಧ ಮತ್ತು ಇಬ್ಬರು ಭಯೋತ್ಪಾದಕರು ಮೃತಪಟ್ಟಿದ್ದರು. 2021ರ ಆರಂಭದಿಂದ ಜಮ್ಮು ಪ್ರದೇಶದಲ್ಲಿ 29 ಭಯೋತ್ಪಾದಕ ದಾಳಿಗಳು ನಡೆದಿವೆ. ಇವುಗಳಲ್ಲಿ ನಾಗರಿಕರ ಸಾವಿನ ಪ್ರಮಾಣವೂ ಹೆಚ್ಚಾಗತೊಡಗಿದೆ. 2023ರಲ್ಲಿ ನಡೆದ ದಾಳಿಗಳಲ್ಲಿ 12 ನಾಗರಿಕರು ಸಾವನ್ನಪ್ಪಿದರು. ಆದರೆ, 2024ರ ಮೊದಲ ಆರು ತಿಂಗಳ ಅವಧಿಯಲ್ಲೇ 17 ನಾಗರಿಕರು ಸಾವಿಗೀಡಾಗಿದ್ದಾರೆ. ಆಗಸ್ಟ್ 2019ರಲ್ಲಿ ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆಯನ್ನು ರದ್ದುಪಡಿಸಿದ ಬಳಿಕ, ಮೋದಿ ಸರಕಾರ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದಕರು ಮತ್ತು ಪ್ರತ್ಯೇಕತಾವಾದಿಗಳ ವಿರುದ್ಧದ ತನ್ನ ಕಠಿಣ ಕ್ರಮಗಳನ್ನು ಇನ್ನಷ್ಟು ತೀವ್ರಗೊಳಿಸಿದ ಪರಿಣಾಮವೇ ಭಯೋತ್ಪಾದಕರು ತಮ್ಮ ಚಟುವಟಿಕೆಗಳನ್ನು ಜಮ್ಮುವಿಗೆ ವರ್ಗಾಯಿಸಿದ್ದಾರೆ. ಕಳೆದ ಹದಿನೈದು ವರ್ಷಗಳ ಅವಧಿಯಿಂದ ಭಯೋತ್ಪಾದನಾ ಚಟುವಟಿಕೆಗಳಿಂದ ಮುಕ್ತವಾಗಿದ್ದ ಜಮ್ಮುವಿನಲ್ಲಿ 2021ರ ಬಳಿಕ ಮತ್ತೆ ಉಗ್ರ ದಾಳಿಗಳು ಆರಂಭಗೊಂಡವು. ಕಾಶ್ಮೀರ ಕಣಿವೆಯಲ್ಲಿ ಬಹುಪಾಲು ಮುಸ್ಲಿಂ ಜನಸಂಖ್ಯೆ ಇದ್ದರೆ (96.4%), ಜಮ್ಮು ಹೆಚ್ಚು ವೈವಿಧ್ಯಮಯ ಜನಸಂಖ್ಯೆ ಹೊಂದಿದೆ. ಒಟ್ಟಾರೆಯಾಗಿ ಜಮ್ಮುವಿನಲ್ಲಿ ಹಿಂದೂಗಳ ಸಂಖ್ಯೆ 62.5% ಇದ್ದರೂ, ಹಿಂದೂ ಮುಸ್ಲಿಮರ ಜನಸಂಖ್ಯಾ ಅನುಪಾತ ಜಿಲ್ಲೆಯಿಂದ ಜಿಲ್ಲೆಗೆ ಬದಲಾಗುತ್ತದೆ. ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಯುವ ಯಾವುದೇ ಭಯೋತ್ಪಾದಕ ದಾಳಿಗಳು ಹಿಂದೂ ಮುಸ್ಲಿಂ ಮತೀಯ ಉದ್ವಿಗ್ನತೆ ಮತ್ತು ಹಿಂಸಾಚಾರಗಳಿಗೆ ಹಾದಿಮಾಡಿಕೊಡುವ ಅಪಾಯಗಳಿವೆ. ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರ ದಾಳಿಗಳು ಇನ್ನೂ ಹೆಚ್ಚಾಗಬಹುದು. ಆದ್ದರಿಂದ ಭಯೋತ್ಪಾದನೆ ನಿಗ್ರಹಕ್ಕೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ಯೋಧರ ಸಾವಿಗೆ ಪ್ರತಿಕಾರ ತೀರಿಸಲೇ ಬೇಕಿದೆ.

ಸೊಂಪಾದಕೀಯ

ಹೀಗೊಬ್ಬ ಸಮಂತಾ ಪಾರ್ಟಿ

ನಮ್ಮ ದೇಶದಲ್ಲಿ ಜನ ಅತಿ ಹೆಚ್ಚು ಪ್ರೀತಿಸೋದು, ದೇವರ ಮಟ್ಟಕ್ಕೆ ಕೊಂಡೊಯ್ಯೋದು ಸಿನಿಮಾ ತಾರೆಗಳನ್ನ ಮತ್ತು ಕ್ರಿಕೆಟ್ ಆಟಗಾರರನ್ನ. ಅದರಲ್ಲೂ ದಕ್ಷಿಣ ಭಾರತದಲ್ಲಿ ಸಿನಿಮಾ ನಟ ನಟಿಯರ ಮೇಲಿನ ಕ್ರೇಜ್ ತುಂಬಾ ದೊಡ್ಡದು. ಕರ್ನಾಟಕದಲ್ಲಿ ಡಾ. ರಾಜ್ ಕುಮಾರ್ ಅವರ ಮೇಲೆ ಜನ ಇಟ್ಟಿರೋ ಪ್ರೀತಿ ಎಲ್ಲರಿಗೂ ಗೊತ್ತು. ಅದರಂತೆ ರಜಿನಿಕಾಂತ್, ಎನ್‌ಟಿಆರ್, ಎಂಜಿಆರ್‌ಗಳೂ ಜನರ ಪ್ರೀತಿಯ ಸಾಗರದಲ್ಲಿ ಮಿಂದೆದ್ದವರೇ. ಇಂಥ ಫೇಮಸ್ ಸ್ಟಾರ್‌ಗಳ ಹೆಸರಿನಲ್ಲಿ ಅನೇಕ ಒಳ್ಳೆಯ ಕೆಲಸಗಳೂ ಆಗುತ್ತವೆ. ಜತೆಗೆ ಇವರ ಹೆಸರುಗಳು ಮತ್ತು ಪ್ರತಿಮೆಗಳು ಆಯಾ ರಾಜ್ಯದ ಎಲ್ಲ ಕಡೆ ರಾರಾಜಿಸುತ್ತವೆ. ಕರ್ನಾಟಕದಲ್ಲಿ ಅದೆಷ್ಟು ರಸ್ತೆಗಳಿಗೆ ರಾಜ್ ಕುಮಾರ್ ಅವರ ಹೆಸರಿದೆ, ಅದೆಷ್ಟು ರಸ್ತೆ, ಸರ್ಕಲ್‌ಗಳಲ್ಲಿ ರಾಜ್ ಅವರ ಪ್ರತಿಮೆ ಇದೆ ಅಂತ ಕಂಡು ಹಿಡಿಯೋಕೆ ಸೆನ್ಸಸ್ ಮಾಡಬೇಕಾಗಿ ಬರುತ್ತದೆ. ಆದರೆ ಅದ್ಯಾಕೆ ಹೀಗೆ ರಸ್ತೆಗಳಿಗೆ ಹೆಸರಿಡೋದು, ಪ್ರತಿಮೆ ಇಡೋದು ಇವೆಲ್ಲ ಪುರುಷ ನಟರಿಗೆ ಮಾತ್ರ ಆಗುತ್ತದೆ ಅನ್ನೋದು ಆಸಕ್ತಿಕರ. ಹೀರೋಯಿನ್‌ಗಳ ಹೆಸರು ರಸ್ತೆಗೆ ಇಟ್ಟಿದ್ದು, ಹೀರೋಯಿನ್‌ಗಳ ಪ್ರತಿಮೆ ನಿರ್ಮಿಸಿರೋದು ತೀರಾ ಕಮ್ಮಿ. ಹಾಗಂತ ಸಿನಿಮಾಗಳಂತೆ ನಮ್ಮ ಸಮಾಜ ಕೂಡಾ ಪುರುಷ ಪ್ರಧಾನ ಅಂತ ತೀರ್ಮಾನ ಮಾಡೋ ಹಾಗಿಲ್ಲ. ಯಾಕಂದ್ರೆ ಹೀರೋಯಿನ್‌ಗಳನ್ನು ನಮ್ಮ ಪ್ರೇಕ್ಷಕ ಪ್ರಭು ಆರಾಧಿಸಿದ ಎಷ್ಟೋ ಉದಾಹರಣೆಗಳಿವೆ. ಶ್ರೀದೇವಿ, ಮಾಧುರಿ ದೀಕ್ಷಿತ್ ನಮ್ಮ ಕನ್ನಡದ ಮಾಲಾಶ್ರೀ ಅವರು ಅನೇಕ ಪ್ರೇಕ್ಷಕರ ಕನಸಿನ ರಾಣಿಯರು. ಮಾಲಾಶ್ರೀ ಅವರಿಗೆ, ನಟಿ ಸೌಂದರ್ಯ ಅವರಿಗೆ ದೇವಸ್ಥಾನ ಕಟ್ಟಿಸುತ್ತೇವೆ ಅನ್ನೋ ಮಟ್ಟಕ್ಕೆ ಅವರ ಕ್ರೇಜ್ ಇತ್ತು. ಅದು ಈ ಕಾಲದ ಸನ್ನಿ ಲಿಯೋನಿವರೆಗೂ ಇದೆ. ಈಗ ಸದ್ಯಕ್ಕೆ ನಟಿ ಸಮಂತಾ ಅವರಿಗೆ ಅಭಿಮಾನಿಯೊಬ್ಬ ಆಂದ್ರದಲ್ಲಿ ದೇವಸ್ಥಾನ ಕಟ್ಟಿಸಿದ್ದಾನಂತೆ. ಅಲ್ಲಿಗೆ ಸಿನಿ ಪ್ರೇಕ್ಷಕರ ಅಭಿಮಾನದಲ್ಲಿ ಕೊಂಚ ಮಟ್ಟಿಗಿನ ಲಿಂಗ ಭೇಧ ಇದ್ದರೂ ಹೀರೋ ಯಿನ್‌ಗಳನ್ನು ಕೊಂಚ ಕಡೆಗಣಿಸಿದರೂ ಕೆಲವು ಅದೃಷ್ಟವಂತ ಹೀರೋ ಯಿನ್‌ಗಳಿಗಾದರೂ ದೇವಸ್ಥಾನ ಕಟ್ಟಿಸಿಕೊಳ್ಳುವ ಭಾಗ್ಯ ಇರುತ್ತದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಸುದ್ದಿಮನೆ ಎಂಬ ಶಬ್ದ ಟಂಕಸಾಲೆ

ಸುದ್ದಿಮನೆಯನ್ನು ಹೊಸ ಪದಗಳ ಟಂಕಸಾಲೆ ಎಂದು ಕರೆಯುವುದುಂಟು. ಕಾರಣ ಇಲ್ಲಿ ಹೊಸ ಹೊಸ ಶಬ್ದಗಳನ್ನು ಟಂಕಿಸುವಂಥ ಅಗತ್ಯ ಪ್ರತಿ ದಿನವೂ ಎದುರಾಗುತ್ತಲೇ ಇರುತ್ತದೆ. ಶಬ್ದಗಳ ಟಂಕಸಾಲೆ ಎಂದು ಕರೆದವರು ತಿ.ತಾ.ಶರ್ಮರು. ಸುಮಾರು 163 ವರ್ಷಗಳ ಹಿಂದೆ ಅಂದರೆ 1859 ರಲ್ಲಿ 'ಮೈಸೂರು ವೃತ್ತಾಂತ ಬೋಧಿನಿ' ಪತ್ರಿಕೆ ಯಲ್ಲಿ, ಕನ್ನಡ ಪತ್ರಿಕಾ ಭಾಷೆ ಕುರಿತ ಲೇಖನದಲ್ಲಿ, 'ಒಂದು ಪತ್ರಿಕೆಯನ್ನು ನಡೆಸುವ ದಿಶೆಯಲ್ಲಿ ಕನ್ನಡ ಭಾಷೆ ಬೆಳೆದು ಸಮೃದ್ಧವಾಗಿದೆ. ಮೂರು ಮಾತುಗಳಲ್ಲಿ ಮೂರು ಲೋಕಗಳ ಚಿತ್ರವನ್ನು ಮೂಡಿಸಬಲ್ಲ ಅಂತಃಶಕ್ತಿ ಕನ್ನಡ ಭಾಷೆಗೆ ಇದೆ. ಪತ್ರಿಕೆಗಳ ಮೂಲಕ ಈ ಭಾಷೆಯ ಶಬ್ದ ಭಂಡಾರ ವನ್ನು ಮತ್ತಷ್ಟು ಬೆಳೆಸುವ ಅವಕಾಶವಿದೆ' ಎಂದು ಅಭಿಪ್ರಾಯಪಡಲಾಗಿದೆ. ಕನ್ನಡ ಭಾಷೆ ಒಂದು ಸಮೃದ್ಧ ಮತ್ತು ಪರಿಪಕ್ವ ಭಾಷೆಯೆಂದೂ, ಪತ್ರಿಕಾ ಭಾಷೆಯಾಗಿ ಯಾವ ವಿಷಯವನ್ನಾದರೂ ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸಬಹುದು ಎಂದೂ ಆ ದಿನಗಳಲ್ಲೇ ವೇದ್ಯವಾಗಿದೆ. ಆದರೂ ವಿಜ್ಞಾನ ಮತ್ತು ತಂತ್ರಜ್ಞಾನ ಈ ದಿನಗಳಲ್ಲಿ ವ್ಯಾಪಕವಾಗಿರುವುದರಿಂದ, ಇಂಟರ್ನೆಟ್ ಸರ್ವವ್ಯಾಪಿಯಾಗಿರುವುದರಿಂದ, ಪ್ರತಿ ದಿನ ಹೊಸ ಹೊಸ ಪದಗಳು ಹುಟ್ಟಿಕೊಳ್ಳುತ್ತಿರುವುದರಿಂದ, ಅದಕ್ಕೆ ಸರಿ ಸಮನಾದ ಕನ್ನಡ ಪದವನ್ನು ಟಂಕಿಸುವುದು ಅಗತ್ಯವಾಗಿದೆ. ಈ ಕಾರ್ಯದಲ್ಲಿ ಪತ್ರಕರ್ತರು ಭಾಷಾ ಪಂಡಿತರಿಗಿಂತ ಒಂದು ಹೆಜ್ಜೆ ಮುಂದೆಯೇ. ಪತ್ರಕರ್ತನಾದವನು ಯಾವತ್ತೂ ಬಹುಸಂಖ್ಯಾತರಿಗೆ ಅರ್ಥವಾಗುವ, ತಟ್ಟನೆ ತಿಳಿಯುವ ಪದಗಳನ್ನೇ ಟಂಕಿಸುವುದನ್ನು ಗಮನಿಸಬಹುದು. ಲೋಕಮಾನ್ಯ ಬಾಲಗಂಗಾಧರ ಟಿಳಕರು 'ಕೇಸರಿ' ಪತ್ರಿಕೆಯಲ್ಲಿದ್ದಾಗ, ಒಮ್ಮೆ ಉಪ ಸಂಪಾದಕನಾಗಿದ್ದವರೊಬ್ಬರು ಬಂದು, 'ಟಿಳಕರೇ, ಬ್ಯುರಕ್ರಸಿ ಎಂಬ ಇಂಗ್ಲಿಷ್ ಪದವನ್ನು ಹೇಗೆ ಭಾಷಾಂತರಿಸುವುದು?' ಎಂದು ಕೇಳಿದರಂತೆ. ಆಗ ಟಿಳಕರು ತುಸು ಯೋಚಿಸಿ, 'ಅದಕ್ಕೆ ನೌಕರಶಾಹಿ ಎಂದು ಹೇಳಬಹುದಲ್ಲ? ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ಪದ. ಅಲ್ಲದೇ ಮೂಲ ಆಂಗ್ಲ ಪದಕ್ಕೆ ಸರಿ ಹೊಂದುವ ಪದವೂ ಹೌದು' ಎಂದು ಹೇಳಿದರಂತೆ. ಅಂದಿನಿಂದ ಭಾರತೀಯ ಭಾಷೆಗಳಲ್ಲಿ ಆ ಪದವನ್ನು ಬಳಸಲಾಗುತ್ತಿದೆ. 1930 ರ ಆರಂಭದಲ್ಲಿ ಇಂಗ್ಲೆಂಡಿನಲ್ಲಿ ರೌಂಡ್ ಟೇಬಲ್ ಕಾನ್ಫರೆನ್ಸ್ ನಡೆಯಿತು. ಮೊದಲ ಬಾರಿಗೆ ಅಂಥದ್ದೊಂದು ಸಮಾವೇಶ ನಡೆದಾಗ ಅದನ್ನು ಹೇಗೆ ಭಾಷಾಂತರಿಸುವುದು ಎಂದು ಕನ್ನಡ ಪತ್ರಿಕೆಗಳ ಸುದ್ದಿಮನೆಯಲ್ಲಿ ಚರ್ಚೆ ಆಯಿತು. ಆಗ ಸಿದ್ದವನಹಳ್ಳಿ ಕೃಷ್ಣ ಶರ್ಮ ಅವರು ಅದನ್ನು 'ದುಂಡು ಮೇಜಿನ ಪರಿಷತ್ತು' ಎಂದು ಭಾಷಾಂತರಿಸಿದ್ದರು. ಆ ಪದ ಇಂದಿಗೂ ಚಾಲ್ತಿಯಲ್ಲಿದೆ. ಇದನ್ನೇ ತಿ.ತಾ.ಶರ್ಮ ಅವರು ತಮ್ಮ 'ವಿಶ್ವ ಕರ್ನಾಟಕ' ಪತ್ರಿಕೆಯಲ್ಲಿ 'ಚಕ್ರಗೋಷ್ಠಿ' ಎಂದು ಬರೆದಿದ್ದರು. ದುಂಡು ಮೇಜಿನ ಪರಿಷತ್ತಿಗಿಂತ ಚಕ್ರಗೋಷ್ಠಿ ಸರಳವಾಗಿದ್ದರೂ, ಮೊದಲನೆಯದೇ ಹೆಚ್ಚು ಜನಪ್ರಿಯವಾಯಿತು. ಇಂದಿಗೂ ಯಾರೂ ಚಕ್ರಗೋಷ್ಠಿ ಎಂದು ಹೇಳುವುದಿಲ್ಲ. ಕಡೆಂಗೊಡ್ಲು ಶಂಕರ ಭಟ್ಟ, ಮುದವೀಡು ಕೃಷ್ಣರಾವ್, ಸಿದ್ಧವನಹಳ್ಳಿ ಕೃಷ್ಣ ಶರ್ಮ, ತಿ. ತಾ.ಶರ್ಮ, ದಿವಾಕರ ರಂಗರಾವ್ ಮುಂತಾದವರು ಕನ್ನಡ ಪತ್ರಿಕಾ ಭಾಷೆ ಬೆಳೆಯಲು ಸಹಕಾರಿಯಾಗಿದ್ದನ್ನು ಸ್ಮರಿಸಲೇಬೇಕು. ಆನೆಗಳು ತಮ್ಮ ಗಂಡಸ್ಥಳವನ್ನು ಉಜ್ಜುವ ಪ್ರಕ್ರಿಯೆಗೆ ಏನು ಹೇಳುವುದು ಎಂದು ನಲವತ್ತರ ದಶಕದಲ್ಲಿ ಸುದ್ದಿಮನೆಯಲ್ಲಿ ಚರ್ಚೆಯಾದಾಗ, ಮುದವೀಡು ಕೃಷ್ಣರಾವ್ ಅವರು, 'ಕರಟಿಕಟಘೀಕರಣ' (ಕರಟ, ಕರಟಿ = ಆನೆಯ ಗಂಡಸ್ಥಳ) ಎಂಬ ಪದ ಟಂಕಿಸಿದ್ದರೆಂದು, ಹಿಂದಿನ ಕಾಲದ ಪತ್ರಕರ್ತರ ಬಾಯಲ್ಲಿ ಕೇಳಿದ್ದೇನೆ. ಮನುಷ್ಯರಂತೆ ದೇಹ ಸುಖ ಪಡೆಯುವ ದೇವತೆಗಳು ಎಂಬುದಕ್ಕೆ 'ಕಾಯಪ್ರವೀಚಾರ' ಎಂದು ಭಾಷಾಂತರಿಸಿದಾಗ, ಅದನ್ನು ಕನ್ನಡಕ್ಕೆ ಪುನಃ ತರ್ಜುಮೆ ಮಾಡಬೇಕಾದ ಪ್ರಸಂಗ ಬರಬಹುದು.

ನೋಡುತ್ತಿರುವಂತೆಯೇ ಪವಾಡವು ಸಂಭವಿಸಿತು!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ

vveditoped@gmail.com

ನಮ್ಮ ಭೂಮಿಯ ಮೇಲೆ ಜೀವರಾಶಿಯು ನೀರಿನಲ್ಲಿ ಹುಟ್ಟಿತು. ಏಕಕಣ ರೂಪದ ಜೀವಿಗಳು, ಸಮುದ್ರದ ನೀರನ್ನೇ ರೂಪಾಂತರಿಸಿಕೊಂಡು, ಅದನ್ನು ತಮ್ಮ ಒಡಲಿನ ಜೀವಜಲವನ್ನಾಗಿ ಪರಿವರ್ತಿಸಿತು. ಅದುವೇ ಕೋಶರಸ ಅಥವ ಸೈಟೋಪ್ಲಾಸಂ. ಜೀವವಿಕಾಸದ ಫಲವಾಗಿ ಬಹುಕೋಶ ಜೀವಿಗಳು ಉದಯಿಸಿದುವು. ಬಹುಕೋಶ ಜೀವಿಗಳಲ್ಲಿ ಅಸಂಖ್ಯ ನಮೂನೆಗಳು ವಿಕಾಸವಾದವು. ಒಂದು ಕಾಲ ಘಟ್ಟದಲ್ಲಿ ಜೀವಿಗಳು ನೀರನ್ನು ಬಿಟ್ಟು ಭೂಮಿಯ ಕಡೆಗೆ ಹೋಗವು ನಿರ್ಧರಿಸಿದವು. ಹಾಗೇ ಹೋಗುವಾಗ ರೂಪಾಂತರಿತ ಸಮುದ್ರದ ನೀರಾದ ಕೋಶರಸದಲ್ಲಿ ಉಳಿಸಿಕೊಂಡವು. ಜೊತೆಗೆ ತಮ್ಮ ಒಡಲಿನಲ್ಲಿ ಒಂದು ರಕ್ತಪರಿಚಲನಾ ವ್ಯವಸ್ಥೆಯನ್ನು ರೂಪಿಸಿಕೊಂಡವು. ಈ ವ್ಯವಸ್ಥೆಯ ಮೂಲಕ ತಮ್ಮ ದೇಹದ ಪ್ರತಿಯೊಂದು ಜೀವಕೋಶಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸಿ, ತ್ಯಾಜ್ಯವನ್ನು ಕ್ಲುಪ್ತವಾಗಿ ವಿಸರ್ಜಿಸಲು ರೂಢಿಸಿಕೊಂಡವು. ಈ ಪರಿಚಲನೆಯಲ್ಲಿ ಹರಿಯುವ ರಕ್ತವೂ ಸಹ ರೂಪಾಂತರಿತ ಸಮುದ್ರ ನೀರೆ! ಹಾಗಾಗಿ ಸಮುದ್ರದ ನೀರು, ಕೋಶರಸ ಹಾಗೂ ರಕ್ತದ ರಾಸಾಯನಿಕ ಸಂಯೋಜನೆಯನ್ನು ಅಕ್ಕಪಕ್ಕ ಇಟ್ಟು ಪರಿಶೀಲಿಸಿದರೆ, ಅವುಗಳ ನಡುವೆ ಅಂತಹ ದೊಡ್ಡ ವ್ಯತ್ಯಾಸವೇನೂ ಕಾಣುವುದಿಲ್ಲ.

ನಮ್ಮ ದೇಹದಲ್ಲಿರುವ ನೀರಿನ ಪ್ರಮಾಣವು ಲಿಂಗ, ವಯಸ್ಸು, ದೇಹರಚನೆ ಹಾಗೂ ಮಾಡುವ ಉದ್ಯೋಗವನ್ನು ಅವಲಂಬಿಸಿರುತ್ತದೆ. ಪುರುಷರ ದೇಹದಲ್ಲಿ ಶೇ.60 ರಷ್ಟು ನೀರಿದ್ದರೆ ಮಹಿಳೆಯರ ದೇಹದಲ್ಲಿ ಶೇ. 55ರಷ್ಟು ನೀರಿದೆ. ಮಹಿಳೆಯಲ್ಲಿ ಸ್ನಾಯುವಿಗಿಂತ ಕೊಬ್ಬು ಅಧಿಕವಾಗಿರುತ್ತದೆ. ಕೊಬ್ಬಿನ ಜೀವಕೋಶಗಳಲ್ಲಿ ನೀರಿನ ಪ್ರಮಾಣವು ಕಡಿಮೆಯಿರುತ್ತದೆ. ನಮ್ಮ ದೇಹದ ರಕ್ತ ಹಾಗೂ ಶ್ವಾಸಕೋಶಗಳಲ್ಲಿ ನೀರು ಶೇ.83 ಆಸುಪಾಸಿನಲ್ಲಿರುತ್ತದೆ. ಸ್ನಾಯುಗಳು ಹಾಗೂ ಮೂತ್ರಪಿಂಡಗಳಲ್ಲಿ ಶೇ. 79 ರಷ್ಟು ನೀರಿರುತ್ತದೆ. ಮಿದುಳು ಮತ್ತು ಹೃದಯದಲ್ಲಿ ಶೇ.73ರಷ್ಟು ನೀರು ಇದ್ದರೆ, ಚರ್ಮದಲ್ಲಿ ಶೇ.64 ರಷ್ಟು ನೀರು ಇರುತ್ತದೆ. ನಮ್ಮ ದೇಹದ ಗಟ್ಟಿಮೂಳೆಗಳಲ್ಲಿ ಶೇ.31ರಷ್ಟು ನೀರು ಇರುತ್ತದೆ. ಮೂಳೆಗಳ ರಚನೆಯಲ್ಲಿ ಖನಿಜ ಮತ್ತು ಲವಣಗಳ ಪಾತ್ರವೇ ಹಿರಿದಾಗಿರುತ್ತದೆ. ನಮ್ಮ ದೇಹದ ಎಲ್ಲ ಜೈವಿಕ ಕೆಲಸ ಕಾರ್ಯಗಳು ನೀರಿನ ಮಾಧ್ಯಮದಲ್ಲಿಯೇ ನಡೆಯುತ್ತವೆ.

ಜೀವದಾಯಕ ನೀರು ಕೆಲವು ಸಂದರ್ಭಗಳಲ್ಲಿ ನಮ್ಮ ದೇಹದಿಂದ ತ್ವರಿತವಾಗಿ ನಷ್ಟವಾಗಬಹುದು. ನಾನಾ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟು ಸಾವು ನೋವಿಗೆ ಕಾರಣವಾಗಬಹುದು. ಅಂತಹ ಸಂದರ್ಭಗಳಲ್ಲಿ ವಾಂತಿ, ಭೇದಿ, ಜ್ವರ ಮತ್ತು ತೀವ್ರಶಾಖಗಳು ಮುಖ್ಯವಾದವು. ಮಕ್ಕಳಲ್ಲಿ ಇವು ಅತ್ಯಂತ ಕಡಿಮೆ ಅವಧಿಯಲ್ಲಿ ಉಗ್ರ ರೂಪವನ್ನು ತಳೆಯಬಹುದು. ವಾಂತಿಯಾಗುವಾಗ ಮಗು ತಾನು ತಿಂದ ಎಲ್ಲ ಪದಾರ್ಥಗಳನ್ನು ವಾಂತಿಯ ಮೂಲಕ ಹೊರಕ್ಕೆ ಹಾಕುತ್ತದೆ. ಆನಂತರ ನೀರು ನೀರಾಗಿ ವಾಂತಿಯನ್ನು ಮಾಡಬಹುದು. ಭೇದಿಯ ಮೂಲಕ ನೀರು ತ್ವರಿತವಾಗಿ ಹೊರಹೋಗುತ್ತದೆ. ಕಾಲರ ಮುಂತಾದ ಸೋಂಕುಗಳಲ್ಲಿ ಆಗುವ ಭೇದಿಯು ನೀರುನೀರಾಗಿಯೇ ಇರುತ್ತದೆ. ಮಲವೇ ಇರುವುದಿಲ್ಲ. ಇಂತಹ ನೀರು ಭೇದಿಯು ಮಗುವಿನ ಮೈಯಲ್ಲಿ ನೀರನ್ನು ತ್ವರಿತವಾಗಿ ಕಳೆದು, ಮಗುವನ್ನು ಸಾವಿನೆಡೆಗೆ ಸಾಗಿಸುತ್ತದೆ. ವಿಪರೀತ ಜ್ವರ ಬಂದಾಗ, ಮೈಯಲ್ಲಿರುವ ನೀರಿನಂಶವು ಬೆವರಿನ ಮೂಲಕ ಆವಿಯಾಗಬಹುದು. ಹಾಗೆಯೇ ವಿಪರೀತ ಬಿಸಿಲಲ್ಲಿ ನಡೆಯುವಾಗ ಇಲ್ಲವೇ ಕೆಲಸವನ್ನು ಮಾಡುವಾಗ, ಇಲ್ಲವೇ ಕುಲುಮೆ, ಬಾಯ್ಲರ್, ಸೌದೆ ಒಲೆಯಲ್ಲಿ ಅಡುಗೆ ಮುಂತಾದ ಶಾಖ ಪರಿಸರದಲ್ಲಿ ಕೆಲಸ ಮಾಡುವಾಗಲೂ ಮೈಯಲ್ಲಿರುವ ನೀರಿನಂಶವು ನಷ್ಟವಾಗುತ್ತದೆ. ಸಕಾಲದಲ್ಲಿ ನೀರು, ಲವಣ ಹಾಗೂ ಖನಿಜಗಳನ್ನು ಪೂರೈಸದಿದ್ದರೆ ಮಗುವು ಸಾಯುವುದು ಶತಸಿದ್ಧ.

ಜ್ವರ, ವಾಂತಿ, ಭೇದಿ ಮುಂತಾದವು ಪೀಡಿತರಾಗಿರುವ ಮಕ್ಕಳು ಹಾಗೂ ವಯಸ್ಕರರಲ್ಲಿ ಪ್ರತಿ ಶತ ಎಷ್ಟು ನೀರು ನಷ್ಟವಾಗಿದೆ ಎನ್ನುವುದನ್ನು ನೋಡಿಕೊಂಡು ಅವರಿಗೆ ಯಾವ ರೀತಿಯ ಚಿಕಿತ್ಸೆಯು ಸೂಕ್ತವಾಗಬಲ್ಲುದು ಎನ್ನುವುದನ್ನು ನಿರ್ಧರಿಸಬಹುದು. ಮೈಯಲ್ಲಿರುವ ಸಹಜ ನೀರು ನಷ್ಟವಾದ ಸ್ಥಿತಿಯನ್ನು ನಿರ್ಜಲತೆ ಅಥವ ಡಿ-ಹೈಡ್ರೇಶನ್ ಎಂದು ಕರೆಯುವುದು ವಾಡಿಕೆ. ಈ ನಿರ್ಜಲತೆಯಲ್ಲಿ ಮೂರು ಘಟ್ಟಗಳಿವೆ. ಸೌಮ್ಯ ನಿರ್ಜಲತೆ ಅಥವ ಮೈಲ್ಡ್ ಡಿ-ಹೈಡ್ರೇಷನ್, ಮಧ್ಯಮ ಪ್ರಮಾಣದ ನಿರ್ಜಲತೆ ಅಥವ ಮೀಡಿಯಂ ಡಿ-ಹೈಡ್ರೇಶನ್ ಹಾಗೂ ತೀವ್ರ ನಿರ್ಜಲತೆ ಅಥವ ಸಿವಿಯರ್ ಡಿ-ಹೈಡ್ರೇಶನ್. ಸೌಮ್ಯ ಸ್ವರೂಪದ ನಿರ್ಜಲತೆದಲ್ಲಿ ಮಗುವು ಚುರುಕಾಗಿರುತ್ತದೆ. ಕಣ್ಣುಗಳು ಹೊಳಪಿನಿಂದ ಕೂಡಿರುತ್ತವೆ. ಕಣ್ಣುಗಳು ಗುಳಿ ಬಿದ್ದಿರುವುದಿಲ್ಲ. ನೀರು ಮತ್ತು ದ್ರವ ಪದಾರ್ಥಗಳನ್ನು ಕೊಟ್ಟರೆ ಕುಡಿಯುತ್ತದೆ. ಚರ್ಮವೂ ಆರೋಗ್ಯವಾಗಿರುತ್ತದೆ. ಈ ಸೌಮ್ಯ ಸ್ವರೂಪದ ನಿರ್ಜಲತೆವನ್ನು ಸರಿಪಡಿಸುವುದು ಸುಲಭ. ಮಧ್ಯಮ ಪ್ರಮಾಣದ ನಿರ್ಜಲತೆವಾದಾಗ ಮಗುವು ನೆಮ್ಮದಿಯನ್ನು ಕಳೆದುಕೊಂಡಿರುತ್ತದೆ. ಕಿರಿಕಿರಿಯನ್ನು ತೋರುತ್ತದೆ. ಅಳುತ್ತಿರುತ್ತದೆ. ಕಣ್ಣುಗಳ ಹೊಳಪು ಕಡಿಮೆಯಾಗಿ ಕಣ್ಣು ಗುಳಿ ಬಿದ್ದಿರಬಹುದು. ನೀರು ಮತ್ತು ದ್ರವಪಾದರ್ಥಗಳನ್ನು ಕೊಟ್ಟರೆ ಆತುರಾತುರವಾಗಿ ಕುಡಿಯುತ್ತದೆ. ಮೈ ಚರ್ಮವನ್ನು ಎಳೆದರೆ, ಆ ಚರ್ಮವು ನಿಧಾನವಾಗಿ ಮೊದಲಿನ ರೂಪಕ್ಕೆ ಮರಳುತ್ತದೆ. ತೀವ್ರ ಸ್ವರೂಪದ ನಿರ್ಜಲತೆದಲ್ಲಿ ಮಗುವು ಜಡವಾಗಿರುತ್ತದೆ. ಪ್ರಜ್ಞೆಯು ಹೋಗಿರಬಹುದು. ಕಣ್ಣುಗಳ ಹೊಳಪು ಬಹುಪಾಲು ಕಡಿಮೆಯಾಗಿರುತ್ತದೆ ಹಾಗೂ ಎರಡೂ ಕಣ್ಣುಗಳು ಗುಳಿಬಿದ್ದಿರುತ್ತವೆ. ನೀರು ಮತ್ತು ದ್ರವಪದಾರ್ಥಗಳನ್ನು ಕೊಟ್ಟರೆ ಅದನ್ನು ಕುಡಿಯುವುದಿಲ್ಲ, ಮೈ ಚರ್ಮವನ್ನು ಎಳೆದರೆ, ಆ ಚರ್ಮವು ಪೂರ್ವ ಸ್ಥಿತಿಗೆ ಮರಳಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ. ಈ ಘಟ್ಟದಲ್ಲಿ ಮಗುವಿಗೆ ಓಆರ್‌ಎಸ್, ಹಣ್ಣಿನ ಜ್ಯೂಸ್, ಬೇಳೆಕಟ್ಟು, ನೀರುಮಜ್ಜಿಗೆ, ಗಂಜಿ ಮುಂತಾದವನ್ನು ಕುಡಿಯಲು ಕೊಟ್ಟರೆ, ಮಗುವು ಬೇಗ ಸುಧಾರಿಸಿಕೊಳ್ಳುತ್ತದೆ.

ತೀವ್ರ ಸ್ವರೂಪದ ನಿರ್ಜಲತೆದಲ್ಲಿ ಮಗುವಿಗೆ ಸಕಾಲದಲ್ಲಿ ನೀರು, ಖನಿಜ ಮತ್ತು ಲವಣಗಳನ್ನು ಪೂರೈಸದಿದ್ದರೆ ಸಾವು ಕಟ್ಟಿಟ್ಟ ಬುತ್ತಿ. ಇವನ್ನು ಓಆರ್‌ಎಸ್ ಅಥವ ಇತರ ದ್ರವಗಳ ಮೂಲಕ ಪೂರೈಸಲು ಸಾಧ್ಯವಿಲ್ಲ. ಹಾಗಾಗಿ ಮಕ್ಕಳಿಗೆ ರಕ್ತನಾಳದ ಮೂಲಕ ನೀರು-ಲವಣ-ಖನಿಜಗಳನ್ನು ಪೂರೈಸಬೇಕಾಗುತ್ತದೆ. ಇದನ್ನು ಸಿರೆಮೂಲಕ ದ್ರವ ಪೂರೈಕೆ ಅಥವ ಇಂಟ್ರಾವೀನಸ್ ಇನ್‌ಫ್ಯೂಶನ್ ಎನ್ನುವರು. ಸಂಕ್ಷಿಪ್ತವಾಗಿ ಐವಿ ಇನ್‌ಫ್ಯೂಶನ್ ಅಥವ ಐವಿ ಫ್ಲೂಯಿಡ್ಸ್ ಎಂದೂ ಕರೆಯುವರು. ಈ ಐವಿ ಫ್ಲೂಯಿಡ್ಸ್ ಅಥವ ಸಿರೆದ್ರವದ ತಂತ್ರಜ್ಞಾನವು ಬೆಳೆದುಬಂದ ದಾರಿಯು ರೋಚಕವಾಗಿದೆ.

ಸಿರೆದ್ರವದ ಉಗಮವನ್ನು ಅರಿಯಲು ನಾವು ಮಧ್ಯಯುಗದ ಯೂರೋಪಿಗೆ ಹೋಗಬೇಕು. ಯುದ್ಧಗಳಲ್ಲಿ, ಅಪಘಾತಗಳಲ್ಲಿ ಹಾಗೂ ಪ್ರಸವದಲ್ಲಿ ವಿಪರೀತ ರಕ್ತಸ್ರಾವದಿಂದ ಜನರು ಸಾಯುವುದು ಸಾಮಾನ್ಯವಾಗಿತ್ತು. ಹಾಗಾಗಿ ಇಂತಹ ಜನರ ಜೀವವನ್ನು ಉಳಿಸಲು ರಕ್ತಪೂರಣವನ್ನು ಮಾಡಿದರೆ ಒಳ್ಳೆಯದು ಎಂದು ವೈದ್ಯರು ತರ್ಕಿಸಿದರು. ಅದಕ್ಕಾಗಿ ಅವರು ಪ್ರಾಣಿಗಳ ರಕ್ತವನ್ನು ಮನುಷ್ಯರಿಗೆ ಪೂರಣವನ್ನು ಮಾಡುವ ಪ್ರಯೋಗವನ್ನು ನಡೆಸಿದರು. ಆದರೆ ಇಂತಹ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಕೊನೆಗೆ ಬ್ರಿಟನ್ ಮತ್ತು ಫ್ರಾನ್ಸ್ ಸರಕಾರಗಳು ಹಾಗೂ ಚರ್ಚ್ ಸಾಮೂಹಿಕ ವಾಗಿ ಸೇರಿ ಪ್ರಾಣಿ-ಮನುಷ್ಯರ ರಕ್ತಪೂರಣವನ್ನು ನಿರ್ಬಂಧಿಸಿದರು. ಕೊನೆಗೆ ಜೇಮ್ಸ್ ಬ್ಲಂಡೆಲ್ (1790-1878) ಮಾನವ-ಮಾನವ ರಕ್ತಪೂರಣವನ್ನು ಯಶಸ್ವಿಯಾಗಿ ಕೈಗೊಂಡ (1829).

ಕಾಲರ, ಅನಾದಿ ಕಾಲದ ಕಾಯಿಲೆ. ಇದಕ್ಕೆ ಕಾರಣ ವಿಬ್ರಿಯೋ ಕಾಲರೆ ಎನ್ನುವ ಬ್ಯಾಕ್ಟೀರಿಯ. ಕಲುಷಿತ ಆಹಾರ-ಪಾನೀಯಗಳ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಕಾಲರದ ಪ್ರಮುಖ ಲಕ್ಷಣ ವಾಂತಿ ಮತ್ತು ಭೇದಿ. ಮಕ್ಕಳು ಹಾಗೂ ವಯಸ್ಕರರು ತೀವ್ರ ನಿರ್ಜಲತೆಕ್ಕೆ ತುತ್ತಾಗಿ ಸಾಯುವುದು ಸರ್ವೇ ಸಾಮಾನ್ಯವಾಗಿತ್ತು. 1846-1860ರ ನಡುವೆ ಯೂರೋಪಿನಲ್ಲಿ ಕಾಣಿಸಿಕೊಂಡ ಕಾಲರ ಹತ್ತು ಲಕ್ಷ ಜನರ ಸಾವಿಗೆ ಕಾರಣವಾಯಿತು. ಈ ಘಟ್ಟದಲ್ಲಿ ಕೆಲವರು ಯೋಚಿಸಿದರು. ಪ್ರಸವೋತ್ತರ ರಕ್ತಸ್ರಾವದಿಂದ ಸಂಭವಿಸುವ ತಾಯಂದಿರ ಮರಣವನ್ನು ತಪ್ಪಿಸಲು ರಕ್ತಪೂರಣವು ಹೇಗೆ ಉಪಯುಕ್ತವಾದಬಲ್ಲುದೋ, ಹಾಗೆಯೇ ಕಾಲರದಿಂದ ನಿರ್ಜಲತೆಕ್ಕೆ ತುತ್ತಾದವರಿಗೂ ನೀರು, ಲವಣಾದಿಗಳನ್ನು ಪೂರೈಸಿದರೆ, ಅವರೂ ಬದುಕುವ ಸಾಧ್ಯತೆಯು ಹೆಚ್ಚುತ್ತದೆ ಎನ್ನುವುದು ಅವರ ಚಿಂತನ-ಮಂಥನಗಳ ಸಾರಾಂಶವಾಗಿತ್ತು.

1656ರಲ್ಲಿ ಬ್ರಿಟನ್ನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಕ್ರಿಸ್ಟೋಫರ್ ರೆನ್, ಮೊದಲಬಾರಿಗೆ ಸಿರೆದ್ರವವನ್ನು ತುಂಬಲು ಸೂಕ್ತವಾದ ಉಪಕರಣವನ್ನು ಸಿದ್ಧಪಡಿಸಿದ. ಇವನು ಬಾತುಕೋಳಿಯ ಪುಕ್ಕವನ್ನು ತೆಗೆದುಕೊಂಡ. ಅದರ ಒಂದು ತುದಿಗೆ ಹಂದಿಯ ಮೂತ್ರಕೋಶವನ್ನು ಅಳವಡಿಸಿದ. ಮೂತ್ರಕೋಶದೊಳಗೆ ವೈನ್ ತುಂಬಿದ. ಬಾತುಕೋಳಿಯ ಚೂಪಾದ ತುದಿಯನ್ನು ಒಂದು ನಾಯಿಯ ಸಿರೆಯೊಳಗೆ ತೂರಿಸಿದ. ಮೂತ್ರಕೋಶವನ್ನು ನಿಧಾನವಾಗಿ ಒತ್ತಿದ. ಮೂತ್ರಕೋಶದಲ್ಲಿದ್ದ ವೈನ್ ಸಾವಕಾಶವಾಗಿ ನಾಯಿಯ ಸಿರೆಯೊಳಗೆ ಹೋಗಲಾರಂಭಿಸಿತು. ಮೂತ್ರಕೋಶದಲ್ಲಿದ್ದ ಅಷ್ಟೂ ವೈನನ್ನು ನಾಯಿಯ ಸಿರೆಯ ಒಳಗೆ ತುಂಬಿದ. ಸ್ವಲ್ಪ ಹೊತ್ತಿನಲ್ಲಿ ನಾಯಿಯು ಆಲ್ಕೋಹಾಲ್ ಮತ್ತಿಗೆ ಒಳಗಾಗಿ ಮಲಗಿತು. ಮರುದಿನ ಎದ್ದು ಆರಾಮವಾಗಿ ಓಡಾಡಲಾರಂಭಿಸಿತು. ಕ್ರಿಸ್ಟೋಫರ್ ರೂಪಿಸಿದ ಈ ಉಪಕರಣದ ದೊಡ್ಡ ಸಮಸ್ಯೆಯೆಂದರೆ, ಅದರ ತಾಳಿಕೆ ಮತ್ತು ಬಾಳಿಕೆ. ಹಂದಿಯ ಮೂತ್ರಾಶಯವು ಬಹಳ ಬೇಗ ಹಾಳಾಗುತ್ತಿತ್ತು. ಅಲ್ಲದೇ, ಒಂದು ಹಂದಿಯನ್ನು ಕೊಲ್ಲಬೇಕಾಗಿತ್ತು. ತಾಂತ್ರಿಕವಾಗಿ ಈ ಉಪಕರಣವು ಉಪಯುಕ್ತ ಎಂದು ಕಂಡುಬಂದರೂ ಸಹ ಪ್ರಾಯೋಗಿಕವಾಗಿ ಸಾಧುವಲ್ಲವೆನಿಸಿತು. ಹಾಗಾಗಿ ಈ ಕ್ಷೇತ್ರದಲ್ಲಿ ಸುಧಾರಣೆಯಾಗಲು 19ನೆಯ ಶತಮಾನಕ್ಕಾಗಿ ಕಾಯಬೇಕಾಯಿತು.

ಥಾಮಸ್ ಐಟ್ಚಿಸನ್ ಲಟ್ಟ (1796-1833) ಎಡಿನ್‌ಬರೋ ಹತ್ತಿರದ ಜಸ್ಪಿಲ್ ಎಂಬ ಹಳ್ಳಿಯಲ್ಲಿ ಹುಟ್ಟಿದ. ಎಡಿನ್‌ಬರೋ ವಿವಿಯಲ್ಲಿ ವೈದ್ಯಕೀಯ ಶಿಕ್ಷಣವನ್ನು 1919ರಲ್ಲಿ ಪೂರ್ಣಗೊಳಿಸಿದ. 1832ರಲ್ಲಿ ಕಾಲರ ಸೋಂಕು ಬ್ರಿಟನ್ನಿನಲ್ಲಿ ವ್ಯಾಪಿಸಿತು. ತುಂಬಾ ಜನರು ಸತ್ತರು. ಲಟ್ಟ ತನ್ನ ಇಬ್ಬರು ಸಹೋದ್ಯೋಗಿಗಳ ಜೊತೆಯಲ್ಲಿ ಡಾ.ಥಾಮಸ್ ಕ್ರೈಗ್ ಮತ್ತು ಡಾ.ರಾಬರ್ಟ್ ಲೆವಿನ್ಸ್ ಜೇಮ್ಸ್ ಬ್ಲಂಡೆಲ್ ಮಾಡಿದ ರಕ್ತಪೂರಣದ ಪ್ರಯೋಗಗಳನ್ನು ಚರ್ಚಿಸಿದ. ಹಾಗೆಯೇ ಐರಿಶ್ ವೈದ್ಯ ಸರ್ ವಿಲಿಯಂ ಬ್ರೂಕ್ ಒಶಾಂಗ್ನೆಸೆ (1809-1889) ಉಪ್ಪು ನೀರು ಕಾಲರ ರೋಗಿಗಳನ್ನು ಹೇಗೆ ಬದುಕಿಸಬಲ್ಲುದು ಎನ್ನುವುದಕ್ಕೆ ಪೂರಕವಾದ ಸಿದ್ಧಾಂತಗಳನ್ನು ಮಂಡಿಸಿದ್ದ. ಆ ಸಿದ್ಧಾಂತವನ್ನು ಪರೀಕ್ಷಿಸಬೇಕೆಂದು ಈ ತ್ರಿವಳಿ ವೈದ್ಯರು ನಿರ್ಧರಿಸಿದ್ದರು. ಮೂವರು ಸೇರಿ ಎಡಿನ್‌ಬರೋ ಕಾಲರ ಆಸ್ಪತ್ರೆಯಲ್ಲಿ ಒಂದು ದಿಟ್ಟ ಪ್ರಯೋಗವನ್ನು ಕೈಗೊಂಡರು.

23 ಮೇ, 1832 ರಲ್ಲಿ ಓರ್ವ ಮಹಿಳೆ. ತೀವ್ರ ಸ್ವರೂಪದ ನಿರ್ಜಲತೆದಿಂದ ಸಾವಿನ ಅಂಚನ್ನು ತಲುಪಿದ್ದಳು. ಆಕೆಯ ಮುಂದೋಳಿನಲ್ಲಿ ಒಂದು ಸಿರೆಯನ್ನು (ಬೆಸಿಲಿಕ್ ವೇಯಿನ್) ಬಹಳ ಕಷ್ಟಪಟ್ಟು ಹುಡುಕಿದರು. ಅದರೊಳಗೆ ಒಂದು ನಳಿಕೆಯನ್ನು ತೂರಿಸಿದರು. ತಮ್ಮದೆ ಆದ ಒಂದು ಒರಟು ಉಪಕರಣದ ಮೂಲಕ ಉಪ್ಪು ನೀರನ್ನು ತುಂಬಲಾರಂಭಿಸಿದರು. ನೋಡ ನೋಡುತ್ತಿರುವಂತೆಯೇ ಪವಾಡವು ಸಂಭವಿಸಿತು. ಮೊದಲು ಮುಂಗೈ ನಾಡಿಯು ಕೈಗೆ ಸಿಕ್ಕಿತು. ಕ್ರಮೇಣ ನಾಡಿಯು ಬಲವಾಗಿ ಮಿಡಿಯಲಾರಂಭಿಸಿತು. ಉಸಿರಾಟವು ಸ್ಥಿರವಾಯಿತು. ಗುಳಿಬಿದ್ದ ಕಣ್ಣುಗಳಲ್ಲಿ ಹೊಳಪು ಕಾಣಿಸಿಕೊಂಡಿತು. ಜೋಲುಬಿದ್ದ ಕೆಳದವಡೆಯು ಸ್ವಸ್ಥಾನಕ್ಕೆ ಮರಳಿತ್ತು. ತಣ್ಣಗಾಗಿದ್ದ ಚರ್ಮವು ಬೆಚ್ಚಗಾಗಲಾರಂಭಿಸಿತು. ಸುಮಾರು 6 ಪಿಂಟ್ (473 ಎಂ.ಎಲ್) ಉಪ್ಪುದ್ರವವನ್ನು ಸಿರೆಯ ಮೂಲಕ ದೇಹದೊಳಗೆ ಕಳುಹಿಸಿದ್ದ. ಆಕೆಯು ಪೂರ್ಣ ಎಚ್ಚರಗೊಂಡಳು. ಅಧಿಕಾರಯುತ ಧ್ವನಿಯಿಂದ ನಾನು ಹುಷಾರಾಗಿದ್ದೇನೆ ಎಂದಳು. ಹಾಸ್ಯವನ್ನು ಮಾಡಿದಳು. ಲಟ್ಟ ಗೆಳೆಯರು ಎಡಿನ್‌ಬರೋ ಆಸ್ಪತ್ರೆಯಲ್ಲಿ ಐವರ ಮೇಲೆ ಸಿರೆ ದ್ರವವನ್ನು ಚುಚ್ಚುವ ಪ್ರಯೋಗವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದರು. 23 ಜೂನ್, 1832ರ ಲ್ಯಾನ್ಸೆಟ್ ಪತ್ರಿಕೆಯಲ್ಲಿ ತಮ್ಮ ಪ್ರಯೋಗದ ಎಲ್ಲ ವಿವರಗಳನ್ನು ಪ್ರಕಟಿಸಿದರು. ಲ್ಯಾನ್ಸೆಟ್ ಪತ್ರಿಕೆಯು ಇದೊಂದು ಪವಾಡ ಸದೃಶವಾದ ಚಿಕಿತ್ಸೆ ಎಂದು ವರ್ಣಿಸಿತು.

ಲಟ್ಟೆ ತನ್ನ ಪ್ರಯೋಗದಲ್ಲಿ ಯಶಸ್ವಿಯಾಗುತ್ತಿದ್ದಂತೆಯೇ ಕಾಲರ ಪಿಡುಗು ಕಡಿಮೆಯಾಯಿತು. ಇದರೊಡನೆ ಲಟ್ಟ ರೂಪಿಸಿದ ಪ್ರಯೋಗವನ್ನು ವೈದ್ಯಜಗತ್ತು ಮರೆಯಿತು. ಸಿರೆದ್ರವಗಳ ಮುಂದಿನ ಘಟ್ಟ ಆರಂಭವಾಗುವುದಕ್ಕೆ 1902ರವರೆಗೆ ಕಾಯಬೇಕಾಯಿತು.

ರಾಜಕಾರಣಿಗಳ ಜಿದ್ದು, ಕಾರ್ಯಾಂಗಕ್ಕೆ ಗುದ್ದು!

ವಿದ್ಯಮಾನ

ಮೋಹನದಾಸ ಕಿಣಿ, ಕಾಪು

kini.mohandas@gmail.com

ಸುದ್ದಿಗಳು ಬೇರೆ ಬೇರೆಯಾದರೂ ಎರಡನ್ನೂ ಜೋಡಿಸಿ ಜಾಲತಾಣಗಳಲ್ಲಿ ಹರಿಬಿಟ್ಟ ಸುದ್ದಿ ಹೀಗಿತ್ತು; ಏನಪ್ಪಾ ಅಂದರೆ; ಒಂದು: 2000 ರು. ಲಂಚ ಪಡೆದ ಲೈನ್ ಮ್ಯಾನ್ ದಸ್ತಗಿರಿ, ಎರಡು: ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿಬಿದ್ದು 500 ರು. ಕೋಟಿಗೂ ಹೆಚ್ಚಿನ ಆಸ್ತಿ ಪತ್ತೆಯಾದ ತಹಶೀಲ್ದಾರ್ ವರ್ಗಾವಣೆ. ಇದರಲ್ಲಿ ವಿಶೇಷವೇನು ಅಂದಿರಾ? ಚಿಕ್ಕ ಮೊತ್ತದ ಲಂಚ ಪಡೆದವರನ್ನು ದಸ್ತಗಿರಿ ಮಾಡಿ, ಭಾರೀ ಮೊತ್ತದ ಅವ್ಯವಹಾರ ಮಾಡಿದವರ ಅಮಾನತು ತೆರವುಗೊಳಿಸಿ ವರ್ಗಾವಣೆ ಮೇಲೆ ಬೇರೆಡೆ ಕೆಲಸ ಮಾಡಲು ಅವಕಾಶ ನೀಡಿದ್ದು. ಇದು ಪ್ರಶ್ನಾರ್ಹ ವಿಷಯವೇ ಅಲ್ಲ, ಇದೇ ಸರಿ. ಏಕೆಂದರೆ ಇಷ್ಟೊಂದು ಅಗಾಧ ಮೊತ್ತದ ಅವ್ಯವಹಾರ ಒಂದೆರಡು ದಿನಗಳಲ್ಲಿ ನಡೆದಿದ್ದೇನಲ್ಲ, ಆಡಳಿತ ನಡೆಸಿದ ಸರಕಾರಗಳ ಮೊದಲು ಬರುವುದೆಲ್ಲ ಬಂದಿದ್ದರೂ, ಹೀಗೆಲ್ಲ ಆಗಿರುವುದಕ್ಕೆ ಕಾರಣ, ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳದಂತೆ ತಡೆದವರೇ ಇಂತಹ ರಕ್ಷಣೆ ನೀಡಿದವರೂ ಆಗಿರುವುದು.

ಆಡಳಿತ ಪಕ್ಷ ಮತ್ತು ವಿಪಕ್ಷಗಳು ರಾಜಕೀಯ ಬದಲಾದಂತೆ ರಾಜಕಾರಣಿಗಳ ಪಾತ್ರ ಬದಲಾಗುತ್ತದೆ. ಆಡಳಿತ ಪಕ್ಷದಲ್ಲಿದ್ದವರು ಸೋತರೆ, ಅವರ ಸ್ಥಾನಕ್ಕೆ ಬೇರೆಯವರು ಆಯ್ಕೆಯಾಗುತ್ತಾರೆ. ಆದರೆ ಅಧಿಕಾರಿಗಳು ಮಾತ್ರ ನಿವೃತ್ತಿ ಹೊಂದುವವರೆಗೆ ಕರ್ತವ್ಯದಲ್ಲಿರುತ್ತಾರೆ. ಗೆದ್ದವರು ಅಧಿಕಾರಿಗಳನ್ನು, ವಿಪಕ್ಷಗಳು ಸರಕಾರವನ್ನು ತರಾಟೆಗೆ ತೆಗೆದುಕೊಂಡರು ಎಂದೆಲ್ಲ ಮಾಧ್ಯಮಗಳು ಬರೆಯುತ್ತವೆ ಇದು ಮೇಲ್ನೋಟಕ್ಕೆ ಮಾತ್ರ. ವಾಸ್ತವ ಬೇರೆಯೇ ಇರುತ್ತದೆ.

ಮೊದಲಿಗೆ, ಕಾನೂನು ನಿರ್ಮಾತೃಗಳೇ ಕಾನೂನು ಮುರಿಯುವುದರಲ್ಲಿ ಅಗ್ರಗಣ್ಯರು. ಕಾನೂನಿನಂತೆ ಕಾರ್ಯ ನಿರ್ವಹಿಸುವ ಉತ್ತರದಾಯಿತ್ವವೇನಿದ್ದರೂ ಅಧಿಕಾರಿಗಳದ್ದು. ಆದ್ದರಿಂದ ಏನೇ ತಪ್ಪಾದರೂ ಶಿಕ್ಷೆ ಅಧಿಕಾರಿಗಳಿಗೆ/ನೌಕರರಿಗೆ ಹೊರತು ರಾಜಕಾರಣಿಗಳಿಗಲ್ಲ. ವಿಚಿತ್ರವೆಂದರೆ ಪರಸ್ಪರ ವೈರಿಯಂತೆ ವರ್ತಿಸುವ ರಾಜಕಾರಣಿಗಳು ಅದೆಷ್ಟೋ ಕಾರ್ಯಕ್ರಮದಲ್ಲಿ ಒಂದೇ ವೇದಿಕೆಯನ್ನು ಒಂದೇ ಊಟದ ಮೇಜನ್ನು ಹಂಚಿಕೊಳ್ಳುತ್ತಾರೆ, ಚುನಾವಣಾ ಪ್ರಚಾರ ಸಭೆಗಳಲ್ಲಿ, ಪತ್ರಿಕಾಗೋಷ್ಠಿ, ವಿಧಾನಸಭಾ ಚರ್ಚೆಯಲ್ಲಿ ಮಾಡುವ ಆರೋಪ ಪ್ರತ್ಯಾರೋಪಗಳ ತೀಕ್ಷ್ಣತೆ ನೋಡಿದರೆ ಆಶ್ಚರ್ಯವಾಗುತ್ತದೆ. ಆದರೆ ತಮ್ಮ ಕೆಲಸ ಸಾಧನೆಗೆ ದಾಳವಾಗಿ ಉಪಯೋಗಿಸುವುದು ಮಾತ್ರ ಸರಕಾರಿ ಅಧಿಕಾರಿಗಳನ್ನೇ! ಈ ಉದಾಹರಣೆಗಳನ್ನು ನೋಡಿ:

ಆಡಳಿತ ಪಕ್ಷದಲ್ಲಿರುವ ಪುಡಾರಿ, ಅದು ಆಡಳಿತದಲ್ಲಿರುವ ಪಕ್ಷದ ಪರಾಜಿತ ಅಭ್ಯರ್ಥಿಯಿರಬಹುದು, ಗೆದ್ದರೂ ವಿಪಕ್ಷದಲ್ಲಿರುವ ಶಾಸಕರಾಗಿರಬಹುದು, ಒಟ್ಟಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವಶಾಲಿ ರಾಜಕಾರಣಿ ಅಥವಾ ರಾಜಕಾರಣಿಗಳ ಸಮೀಪವರ್ತಿಯಾದರೂ ಸಾಕು ಅವರೆಲ್ಲರ ವರಸೆ ಹೇಗಿರುತ್ತದೆಂದರೆ ಕಾನೂನು ಏನೇ ಇರಲಿ, ಅವರು ಹೇಳಿದಂತೆ ಕೇಳಬೇಕು. ಇಲ್ಲ, ನಿಮ್ಮನ್ನು ನೋಡಿಕೊಳ್ಳುತ್ತೇನೆ! ನಾಳೆ ಸಮಸ್ಯೆಯೇನಾದರೂ ಆದರೆ, ತಲೆ ಕೊಡಬೇಕಾದವರು ಹಾಗೆ ಮಾಡಲು ಹೇಳಿದವರಲ್ಲ, ಮಾಡಿದವರು -ಅಂದರೆ ಅಧಿಕಾರಿಗಳು. ಹಿಂದೊಮ್ಮೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿ ನ್ಯಾಯಾಲಯದ ಆದೇಶ ಪಾಲಿಸದಿರುವ ಕಾರಣಕ್ಕೆ ನ್ಯಾಯಾಂಗ ನಿಂದನೆ ಪ್ರಕರಣವು ದಾಖಲಾಗಿತ್ತು. ನ್ಯಾಯಾಲಯ ಸೂಚಿಸಿದ ಅವಧಿಯೊಳಗೆ ಕಾರ್ಯಗತಗೊಳಿಸುವುದಾಗಿ ಇಲಾಖೆಯ ಕಾರ್ಯದರ್ಶಿಗಳು ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದರೂ ಸಂಬಂಧಿಸಿದ ಸಚಿವರು ಕಡತದಲ್ಲಿ ಅನುಮೋದನೆ ನೀಡಲು ತಡಮಾಡಿದ ಕಾರಣಕ್ಕೆ ಆದೇಶವನ್ನು ಕ್ಲಪ್ತಕಾಲದಲ್ಲಿ ಪಾಲಿಸಲು ಸಾಧ್ಯವಾಗಿರಲಿಲ್ಲ. ತಪ್ಪು ಸಚಿವರದ್ದಾದರೂ ಅಫಿಡವಿಟ್ ಸಲ್ಲಿಸಿದ ತಪ್ಪಿಗೆ ಅಧಿಕಾರಿ ಒಂದು ತಿಂಗಳ ಜೈಲು ವಾಸ ಅನುಭವಿಸಬೇಕಾಯಿತು. ಪದೇ ಪದೇ ಸಮನ್ಸ್ ನೀಡಿದರೂ ವಿಚಾರಣೆಗೆ ಹಾಜರಾಗದೆ ತಲೆ ಮರೆಸಿಕೊಳ್ಳುವುದು ಒಬ್ಬರಾದರೆ ನ್ಯಾಯಾಲಯ ಛೀಮಾರಿ ಹಾಕುವುದು ಪೋಲೀಸರಿಗೆ. ಅವ್ಯವಹಾರ ನಡೆಸುವಾಗ ಮೌಖಿಕ ಆದೇಶ ನೀಡಿ ರಾಜಕಾರಣಿಗಳು ತಾವು ಸಂಭಾವಿತರೆಂಬ ಮುಖವಾಡ ಧರಿಸಿ ತಪ್ಪೆಲ್ಲ ಅಧಿಕಾರಿಗಳ ತಲೆಗೆ ಕಟ್ಟುವುದು. ಅಂದಿನ ನಗರ್ವಾಲ್ ಪ್ರಕರಣದಿಂದ ಇಂದಿನ ವಾಲ್ಮೀಕಿ ನಿಗಮದ ಹಗರಣದವರೆಗೆ ನಡೆಯುತ್ತಿರುವುದು ಒಂದೇ!

ಶಾಸಕರು ಒಂದು ಪಕ್ಷ, ಸರಕಾರ ಬೇರೊಂದು ಪಕ್ಷದ್ದಾದರೆ ಇನ್ನೂ ಜಿದ್ದಾಜಿದ್ದಿ. ಸರಕಾರಿ ಕಚೇರಿಗಳಿಗೆ ಭೇಟಿ ನೀಡಿದರೆ ಜನರ ಅಹವಾಲು ಆಲಿಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರೆ, ಅಧಿಕಾರಿಗಳು ಯಾರ ಮಾತನ್ನು ಕೇಳಿದರೂ ಇನ್ನೊಬ್ಬರು ಕೆರಳುತ್ತಾರೆ! ಚುನಾವಣೆ ವೇಳೆಯಲ್ಲಂತೂ ಇದು ಇನ್ನೂ ಹೆಚ್ಚು. ಚುನಾವಣೆ ಮುಗಿಯಲಿ, ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂಬ ಧಮ್ಕಿ ಬೇರೆ. ಗೆದ್ದವರು ಮತ್ತು ಸರಕಾರ ಎರಡೂ ಒಂದೇ ಪಕ್ಷವಾದರೆ ಸ್ವಲ್ಪ ಪರವಾಗಿಲ್ಲ, ಇಲ್ಲದಿದ್ದರೆ ಅಧಿಕಾರಿಗಳ ಪಾಡು ದೇವರಿಗೇ ಪ್ರೀತಿ. ಇತ್ತೀಚೆಗಂತೂ ವಿಪಕ್ಷ ಶಾಸಕರಿರುವ ಕ್ಷೇತ್ರಗಳಲ್ಲಿ ಇಂತಹ ಪರಿಪಾಟಲು ವಿಪರೀತ. ಅಧಿಕಾರಿಗಳು ಯಾರ ಮಾತು ಕೇಳಿದರೂ ತಪ್ಪೇ. ನಾಳೆ ನೆಮ್ಮದಿಯಿಂದ ನಿವೃತ್ತಿ ಸಿಕ್ಕಿದರೆ ಸಾಕೆಂಬ ಪರಿಸ್ಥಿತಿ.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನಿಗಮಮಂಡಳಿಗಳ ಸದಸ್ಯತ್ವಕ್ಕೆ ಶಾಸಕರ ಶಿಫಾರಸಿನ ಮೇರೆಗೆ ನೇಮಕ ಮಾಡಲಾಗುವುದೆಂದು ನೀಡಿದ ಹೇಳಿಕೆಯಲ್ಲಿ ಶಾಸಕರು (ಅಂದರೆ ಆಡಳಿತ ಪಕ್ಷದವರು) ಅಥವಾ ಪರಾಜಿತ ಅಭ್ಯರ್ಥಿಗಳೂ ಶಿಫಾರಸು ಮಾಡಬಹುದು ಎಂದು ಸೇರಿಸಿದ್ದರು. ಅಂದರೆ ಒಟ್ಟಿನಲ್ಲಿ ಆಡಳಿತ ಪಕ್ಷದವರ ಶಿಫಾರಸು ಪರಿಗಣನೆಗೆ ಬರುತ್ತದೆ. ಮತ್ತದೇ ಜಟಾಪಟಿ. ಶಾಸಕರೊಂದು ಪಕ್ಷ, ನೇಮಕಾತಿಯಾದವರದೊಂದು ಪಕ್ಷ. ಒಟ್ಟಿನಲ್ಲಿ ಅಧಿಕಾರಿಗಳು ಸುಸ್ತು.

ಶಾಸಕರು ಮುಖ್ಯಮಂತ್ರಿ ಪರಿಹಾರ ನಿಧಿ ಮುಂತಾದ ಮೂಲಗಳಿಂದ ಧನಸಹಾಯಕ್ಕೆ ಶಿಫಾರಸು ಮಾಡುತ್ತಾರೆ. ಮಂಜೂರಾತಿ ಆದೇಶ ಬರುವಾಗ ಶಾಸಕರು ಬದಲಾದರೆ ಅದು ತನ್ನ ಶಿಫಾರಸಿನಂತೆ ಮಂಜೂರಾಗಿದ್ದು ವಿತರಣೆ ಮಾಡುವ ಸಮಾರಂಭದಲ್ಲಿ ತಾನೂ ಇರಬೇಕೆಂದು ಮಾಜಿಯವರ ಒತ್ತಡ ಒಂದೆಡೆಯಾದರೆ, ಅವರು ಮಾಜಿ, ನಾನೇ ವಿತರಣೆ ಮಾಡುತ್ತೇನೆ ಎಂದು ಹಾಲಿಯವರ ಒತ್ತಡ!

ಇತ್ತೀಚೆಗೆ ಇನ್ನೊಂದು ಹೊಸ ರೀತಿಯ ನಾಟಕ ಆರಂಭವಾಗಿದೆ. ಹೊಸ ಸರಕಾರ ಬಂದೊಡನೆ ಹಿಂದಿನ ಸರಕಾರ ನೀಡಿದ ಗುತ್ತಿಗೆ, ತೆಗೆದುಕೊಂಡ ನಿರ್ಧಾರಗಳನ್ನು ಅಮಾನತ್ತಿನಲ್ಲಿಟ್ಟು ತನಿಖೆ ನಡೆಸುವುದು. ಅಂತಹ ತನಿಖಾ ತಂಡದಲ್ಲಿ ಇರುವವರ ನೇಮಕಾತಿಯಿಂದ ಆರಂಭಿಸಿ, ತನಿಖಾ ವರದಿ ಬರುವಲ್ಲಿನ ಪ್ರತಿಯೊಂದೂ ತಮ್ಮ ಅನುಕೂಲಕ್ಕೆ ತಕ್ಕಂತೆ ಇರಬೇಕೆಂದು ನಿರೀಕ್ಷಿಸುವುದು. ಇದರಲ್ಲಿ ಹಾಲಿ ಮತ್ತು ಮಾಜಿ ಇಬ್ಬರನ್ನೂ ತೂಗಿಸಿಕೊಂಡು ಹೋಗುವಷ್ಟರಲ್ಲಿ ಅಧಿಕಾರಿಗಳು ಸುಸ್ತು! ಸಾಲದ್ದಕ್ಕೆ ಯಾವುದೇ ಹಗರಣದ ತನಿಖಾ ವರದಿ ಎಂದಿಗೂ ಅಧಿಕಾರಿಗಳ ವಿರುದ್ಧ ಇರುವುದೇ ಹೊರತು, ರಾಜಕಾರಣಿಗಳ ವಿರುದ್ಧ ಅಲ್ಲ. ಇತ್ತೀಚಿನ ಹಲವಾರು ಹಗರಣಗಳಲ್ಲಿ(?)ಮೊತ್ತ ಮೊದಲಿಗೆ ಮಾಡುವುದು ಅಧಿಕಾರಿಗಳ ವರ್ಗಾವಣೆ ಅಥವಾ ಅಮಾನತು. ಮೇಲ್ನೋಟಕ್ಕೆ ಕ್ರಮ ಕೈಗೊಂಡಂತೆ ಕಂಡರೂ, ಅಮಾನತು ಮಾಡಿ ಕೆಲವೇ ದಿನಗಳಲ್ಲಿ ಬೇರೊಂದೆಡೆ ನಿಯುಕ್ತಿ ಮಾಡಿರುವುದು ಸುದ್ದಿಯಾಗುವುದಿಲ್ಲ! ಕಾಟಾಚಾರಕ್ಕೆ ಎಂಬಂತೆ ತನಿಖೆಯೂ ನಡೆಯುತ್ತದೆ, ಕ್ರಮೇಣ ಮರೆತೂ ಹೋಗುತ್ತದೆ. ಏಕೆಂದರೆ ಅಂಥವರಿಗೆ ರಾಜಕಾರಣಿಗಳ ಕೃಪಾಕಟಾಕ್ಷ ಇರುತ್ತದೆ. ಇಲ್ಲದವರ ಗತಿ; ಅಧೋಗತಿ!

ರಾಜ್ಯದ ಮಂತ್ರಿಗಳು ಅದರಲ್ಲೂ ಯಾವುದಾದರೂ ಜಿಲ್ಲೆಯ ಉಸ್ತುವಾರಿ ಸಚಿವರು, ಮತ್ತು ಕೇಂದ್ರ ಸರಕಾರದ ಸಚಿವರು ಏಕಕಾಲದಲ್ಲಿ ಜಿಲ್ಲೆಯಲ್ಲಿ ಕಾರ್ಯಕ್ರಮ ಹಾಕಿಕೊಂಡರೆ ಅಧಿಕಾರಿಗಳು ಯಾರ ಸಭೆಗೆ ಹಾಜರಾಗಬೇಕು ಎಂಬ ಗೊಂದಲ. ಇವರ ಸಭೆಗೆ ಹೋದರೆ ಅವರು, ಅವರ ಸಭೆಗೆ ಹೋದರೆ ಇವರು ಗುಟುರು ಹಾಕುತ್ತಾರೆ. ಅಷ್ಟೇಕೆ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗಿದ್ದಾಗ ಅವರದೇ ಪಕ್ಷದ ಸಚಿವರೊಬ್ಬರು ಉಸ್ತುವಾರಿ ಸಚಿವರ ನೆಲೆಯಲ್ಲಿ ಸಭೆ ಕರೆದಿದ್ದರು. ಅದೇ ವೇಳೆ ಮುಖ್ಯಮಂತ್ರಿಯವರೂ ಕಾರ್ಯಕ್ರಮ ಹಾಕಿಕೊಂಡಿದ್ದರು. ಅಧಿಕಾರಿಗಳಿಗೆ ಉಭಯ ಸಂಕಟ. ಶಿಷ್ಟಾಚಾರದಂತೆ ಯಾರಿಗೆ ಹೇಗೆ ಆದ್ಯತೆ ನೀಡಬೇಕು ಎಂಬ ಬಗ್ಗೆ ನಿಯಮಾವಳಿ ಇದೆ; ನಿಜ ಆದರೆ ನಡೆಯುವುದೇ ಬೇರೆ.

ಹಾಗಂತ ಎಲ್ಲರೂ ಸಂಭಾವಿತರೇನಲ್ಲ. ಪದೇಪದೇ ಲೋಕಾಯುಕ್ತ ದಾಳಿಯಾಗಿ ಅಪಾರವಾದ ಆಸ್ತಿ, ನಗದು ಚಿನ್ನ, ಇನ್ನೂ ಬಹಳಷ್ಟು ವಶಪಡಿಸಿಕೊಂಡ ವರದಿಯಾಗುತ್ತದೆ. ಅವರೆಲ್ಲರ ವ್ಯವಹಾರಗಳು ರಾಜಕಾರಣಿಗಳ ಗಮನಕ್ಕೆ ಬಾರದೆ ಇರುವುದಿಲ್ಲ, ಆದರೂ ಅಷ್ಟೊಂದು ಬೆಳೆಯಲು ಕಾರಣ: ಅವರು ನೀರು ಯಾವುದೇ ಗಾತ್ರದ ಪಾತ್ರೆಗೆ ಹೊಂದಾಣಿಕೆಯಾಗುವಂತೆ ಯಾವ ಪಕ್ಷದವರು ಅಧಿಕಾರಕ್ಕೆ ಬಂದರೂ ಹೊಂದಾಣಿಕೆ ಮಾಡಿಕೊಂಡು ತಮ್ಮ ವ್ಯವಹಾರವನ್ನು ಮುಂದುವರಿಸುವ ಚಾಕಚಕ್ಯತೆ ಉಳ್ಳವರು. ಕೆಲವೊಮ್ಮೆ ಇಂತವರೂ ಬದಲಾದ ವ್ಯವಸ್ಥೆಗೆ ಹೊಂದಿಕೊಳ್ಳಲಾಗದೆ ಸಿಕ್ಕಿಬೀಳುತ್ತಾರೆ. ಕಾರಣವಿಷ್ಟೇ; ಬಾಚಿಕೊಂಡದ್ದರಲ್ಲಿ ಹಾಲಿ ಮತ್ತು ಮಾಜಿಗಳು ಇಬ್ಬರೂ ಪಾಲು ಕೇಳಿದರೆ?

ಒಟ್ಟಿನಲ್ಲಿ ರಾಜಕಾರಣಿಗಳ ಜಿದ್ದು -ಅಧಿಕಾರಶಾಹಿಗೆ ಸದಾಕಾಲ ಗುದ್ದು!

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮಿತಿ ಬೇಕು ಪರಿಶೋಧನೆಗೆ

ತಪ್ಪು ಮಾಡುವುದು ಒಂದು ಸಹಜವಾದ ಕ್ರಿಯೆ. To err is human; to forgive devine ಎಂಬ ಗಾದೆ ಇದನ್ನೇ ಹೇಳುತ್ತದೆ. ಯಾರಾದರೂ ತಾವು ತಪ್ಪೇ ಮಾಡಿಲ್ಲ ಎಂದು ಹೇಳಿದರೆ, ಅದರಲ್ಲಿ ಎರಡು ಅರ್ಥಗಳಿವೆ. ಒಂದು, ಅವರು ಏನನ್ನೂ ಮಾಡಲು ಪ್ರಯತ್ನಿಸಿಲ್ಲ, ಇನ್ನೊಂದು ತನ್ನ ತಪ್ಪನ್ನು ಒಪ್ಪಿಕೊಳ್ಳದಿರುವುದು. ಏನೇ ಇರಲಿ, ತಪ್ಪಿನಿಂದ ಪಾಠ ಕಲಿತು ಮುಂದೆ ಸಾಗಬೇಕು. ನಮ್ಮ ತಪ್ಪುಗಳಿಂದ ಸಣ್ಣ ಪುಟ್ಟ ತೊಡಕುಗಳು ಉಂಟಾದಾಗ, ಅದು ಅಷ್ಟಾಗಿ ನಮ್ಮನ್ನು ಕಾಡುವುದಿಲ್ಲ. ಆದರೆ ನಮ್ಮ ಒಂದು ತಪ್ಪು ಹೆಜ್ಜೆ, ದೊಡ್ಡ ಪ್ರಮಾದದಲ್ಲಿ ಪರ್ಯಾವಸಾನಗೊಂಡಾಗ ಅದು ನಮ್ಮ ಮೇಲೆ ಬಹಳ ಪರಿಣಾಮ ಬೀರುತ್ತದೆ. ಇದು ಬಹಳ ನಾಜೂಕಾದ ಪರಿಸ್ಥಿತಿ ಕೂಡ. ಆದ ಎಡವಟ್ಟುಗಳು ವ್ಯವಹಾರಿಕ ನಷ್ಟವನ್ನು ತರಬಹುದು, ಮಾನಸಿಕ ಕ್ಷೋಭೆಯನ್ನೂ ಉಂಟುಮಾಡಬಹುದು. ಆಗೆಲ್ಲ ನಾವು ಆತ್ಮ ವಿಮರ್ಶೆಗೆ ಮುಂದಾಗುತ್ತೇವೆ ಮತ್ತು ಅದು ಅವಶ್ಯಕವೂ ಹೌದು. ನಮ್ಮ ಬಗ್ಗೆ ನಾವೇ ಒಂದು ಆರೋಗ್ಯಕರ ವಿಮರ್ಶೆ ಮಾಡಿಕೊಂಡರೆ ಅದರಿಂದ ನಮ್ಮ ವ್ಯಕ್ತಿತ್ವವು ಹೆಚ್ಚಿನ ಸತ್ವ ಪಡೆಯುತ್ತದೆ, ಇದರಿಂದ ನೈತಿಕ ಮೌಲ್ಯಗಳನ್ನು ಹೆಚ್ಚಾಗಿ ನಮ್ಮ ನಡೆ ನುಡಿಗಳಲ್ಲಿ ಶುದ್ಧತೆಯು ಪ್ರತಿಫಲಿಸುತ್ತದೆ. ಇಷ್ಟರ ಮಟ್ಟಿಗಿನ ಒಳ ಚಿಂತನೆ ನಾವು ಮಾಡಬಹುದಾದ ಕನಿಷ್ಠ ಪ್ರಯತ್ನ.

ಆದರೆ, ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬಹಳವಾದ ಆತ್ಮ ವಿಮರ್ಶೆಯು ನಮ್ಮನ್ನು ಕೀಳರಿಮೆಗೆ ಈಡು ಮಾಡುವ ಸಾಧ್ಯತೆಗಳು ಸಾಕಷ್ಟಿವೆ. ಇಲ್ಲಿಯೇ ನಾವು ಜಾಗೃತರಾಗಬೇಕಾಗಿರುವುದು. ನಮ್ಮನ್ನು ನಾವೇ ಅಗತ್ಯಕ್ಕಿಂತ ಹೆಚ್ಚು ತಪ್ಪಿತಸ್ಥರಂತೆ ಭಾವಿಸುವುದು, ಆಗಿರುವ ಸಮಯ ಸಂದರ್ಭಕ್ಕೆ ನಾನೊಬ್ಬನೇ ಹೊಣೆ ಹೀಗೆಲ್ಲ ಯೋಚಿಸಿ ಕೀಳರಿಮೆಯ ತುಟ್ಟ ತುದಿಗೆ ತಲುಪಿ ಬಿಡುತ್ತೇವೆ. ಇದು ಯಾವ ಹಂತಕ್ಕೆ ಹೋಗುತ್ತದೆಯೆಂದರೆ, ಹಲವು ಬಾರಿ ವ್ಯಕ್ತಿ ಗುಣಪಡಿಸಲಾಗದ ಮನೋಖಿನ್ನತೆಗೆ ಒಳಗಾಗಬಹುದು. ಕೆಲವು ಸಂದರ್ಭಗಳಲ್ಲಿ ಆತ್ಮ ಹತ್ಯೆಯಂತಹ ನಿರ್ಧಾರಕ್ಕೂ ಬಂದುಬಿಡಬಹುದು. ಇದು ಸರಿಯಾದ ಯೋಚನಾ ಮಾರ್ಗವಲ್ಲ, ಬದುಕಿನ ಎಲ್ಲ ಘಟನೆಗಳಿಗೂ ನಾವೊಬ್ಬರೇ ಯಾವಾಗಲೂ ಬಾಧ್ಯಸ್ಥರಾಗಲಾರೆವು. ಮತ್ತೆ ಕೆಲವು ಸನ್ನಿವೇಶಗಳಿಗೆ ನೇರವಾಗಿ ನಾವು ಕಾರಣರಾಗಿರುವುದಿಲ್ಲ. ಪಶ್ಚಾತ್ತಾಪಕ್ಕಿಂತ ಉತ್ತಮವಾದ ಪರಿಹಾರವಿಲ್ಲ. ಒಂದು ಕ್ಷಮಾಪಣಾ ಭಾವ ನಮ್ಮನ್ನು ಅಪರಾಧಿ ಭಾವದಿಂದ ಮೇಲೆತ್ತಬಹುದು. ನಮ್ಮ ಎಲ್ಲ ಪ್ರಶ್ನೆಗಳಿಗೂ ಜಗತ್ತಿನಿಂದ ಉತ್ತರ ನಿರೀಕ್ಷಿಸುವುದು ಸಮಂಜಸವಲ್ಲ. ಡಿವಿಜಿಯವರು ತಮ್ಮ ಮಂಕು ತಿಮ್ಮನ ಕಗ್ಗದಲ್ಲಿ ಬಹಳ ಮಾರ್ಮಿಕವಾಗಿ ಹೇಳಿದ ಹಾಗೆ -

ಎಲ್ಲಿಯೋ ವಿಧಿಯ ಗೂಢದ ಕರ್ಮಶಾಲೆಯಲಿ।
ನಿಲ್ಲದಾಡುತ್ತಿಹುವು ಯಂತ್ರ ಕೀಲುಗಳು॥
ಎಲ್ಲಾಗುಹೋಗುಗಳುಮಾ ಚಕ್ರಗತಿಯಂತೆ।
ತಲ್ಲಣವು ನಿನಗೇಕೆ? - ಮಂಕುತಿಮ್ಮ॥

ಕಾಣದ ಕೈಗಳು ಸೃಷ್ಟಿ ಯಂತ್ರವನ್ನು ತಿರುಗಿಸುತ್ತಿರುವಾಗ, ಅದನ್ನು ನಾವು ನಿಯಂತ್ರಿಸಲಾರೆವು, ಹಾಗಾಗಿ ಅನಗತ್ಯ ತುಮುಲಗಳಿಗೆ ಆಸ್ಪದ ನೀಡಬಾರದು. ನಮಗಾದ ಅನುಭವದಿಂದ ಕಲಿತ ಪಾಠವನ್ನು ಮರೆಯದೆ ಮುನ್ನಡೆಯಬೇಕು.

-ವಿದ್ಯಾಶಂಕರ್ ಶರ್ಮ

ಶಾಲೆಗಳಲ್ಲಿ ವಿಜಯೋತ್ಸವ ಆಚರಿಸಿ

ಭಾರತದಲ್ಲಿ ಪ್ರತಿವರ್ಷ ಜುಲೈ 26ನ್ನು ಕಾರ್ಗಿಲ್ ವಿಜಯ ದಿವಸ ಎಂದು ಆಚರಿಸಲಾಗುತ್ತದೆ. ಈ ಬಾರಿ ದಿನಾಂಕ 26-7-2024 ರಂದು ಕಾರ್ಗಿಲ್ ವಿಜಯದ ರಜತ ಮಹೋತ್ಸವ. ಈ ದಿನಕ್ಕೆ ಭಾರತದ ಇತಿಹಾಸದಲ್ಲಿ ಐತಿಹಾಸಿಕ ಮಹತ್ವವಿದೆ. 1999ರ ಕಾರ್ಗಿಲ್ ಯುದ್ಧದಲ್ಲಿ ನಮ್ಮ ಸೈನಿಕರು ಪ್ರಾಣವನ್ನು ಲೆಕ್ಕಿಸದೆ ಕೆಚ್ಚೆದೆಯಿಂದ ಹೋರಾಡಿ ನಮ್ಮ ಭೂಪ್ರದೇಶವನ್ನು ಉಳಿಸಿದರು. ಈ ಯುದ್ಧದಲ್ಲಿ ಭಾರತೀಯ ಸೇನೆಯ ಅನೇಕರು ಯುದ್ಧದಲ್ಲಿ ಹೋರಾಡಿದರು. ಪ್ರಮುಖ ಅಧಿಕಾರಿಗಳು ಸೇರಿದಂತೆ 527 ಯೋಧರು ವೀರ ಮರಣ ಹೊಂದಿದರು. ಅವರ ಶೌರ್ಯ ಮತ್ತು ಅಚಲವಾದ ದೇಶಪ್ರೇಮವನ್ನು ಸ್ಮರಿಸಿ ನಮ್ಮ ಯುವ ಪೀಳಿಗೆಯಲ್ಲಿ ದೇಶಭಕ್ತಿ ಮತ್ತು ಏಕತೆಯ ಪ್ರಜ್ಞೆಯನ್ನು ಮೂಡಿಸಲು ದಿನಾಂಕ 26-7-2024 ರಂದು ಏಕ ಕಾಲಕ್ಕೆ ಕಾರ್ಗಿಲ್ ವಿಜಯ ರಜತ ಮಹೋತ್ಸವವನ್ನು ರಾಜ್ಯದ ಎಲ್ಲ ಶಾಲೆ-ಕಾಲೇಜುಗಳಲ್ಲಿ ಆಚರಿಸುವಂತೆ ರಾಜ್ಯ ಸರಕಾರ ಸೂಕ್ತ ನಿರ್ದೇಶನ ಹೊರಡಿಸಬೇಕು. ಆಗ ಕಾರ್ಗಿಲ್ ಯುದ್ಧದಲ್ಲಿ ಪಾಲ್ಗೊಂಡು ಹುತಾತ್ಮರಾದ ಮತ್ತು ಭಾಗವಹಿಸಿದ ಸೈನಿಕರ ಶೌರ್ಯದ ಕಥೆಗಳನ್ನು ದೇಶದ ಯೋಧರು, ನಿವೃತ್ತ ಯೋಧರಿಂದ ತಿಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಧಾರವಾಡದಲ್ಲಿ ಕಾರ್ಗಿಲ್ ಸ್ಮಾರಕ ಸಮಿತಿಯು ಅಂದು ಮಧ್ಯಾಹ್ನ 3-30ರಿಂದ 4-30ರ ಸಮಯದಲ್ಲಿ ಏಕ ಕಾಲಕ್ಕೆ ಸುಮಾರು 40 ಶಾಲೆಕಾಲೇಜುಗಳಲ್ಲಿ ಕಾರ್ಯಕ್ರಮ ಯೋಜಿಸಿದೆ.

ಯುದ್ಧವೇ ಇರಲಿ ಪ್ರಾಕೃತಿಕ ವಿಪತ್ತೇ ಇರಲಿ, ಎಲ್ಲರಿಗಿಂತ ಮೊದಲು ದೃಢವಾಗಿ ನಿಲ್ಲುವವರು ನಮ್ಮ ಹೆಮ್ಮೆಯ ಯೋಧರು. ಭಾರತೀಯ ಸೇನೆಯ ಪ್ರತಿ ಸಿಬ್ಬಂದಿಗೂ ಕೃತಜ್ಞತೆ ತಿಳಿಸಲು ಇದೊಂದು ಉತ್ತಮ ಅವಕಾಶ.

-ಉದಯ ಮ. ಯಂಡಿಗೇರಿ ಧಾರವಾಡ

ಡೆಂಘೀ: ನಿರ್ಲಕ್ಷ್ಯ ಸಲ್ಲ

ರಾಜ್ಯದಲ್ಲಿ ಡೆಂಘೀ ಜ್ವರ ಸೋಂಕು ತೀವ್ರಗತಿಯಲ್ಲಿ ಹರಡುತ್ತಿದೆ. ರಾಜ್ಯದ ಬಹುತೇಕ ಎಲ್ಲ ತಾಲೂಕುಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲೂ ಡೆಂಘೀ ಸೋಂಕಿತರಿಗೆ ಬೆಡ್ ಸಿಗುತ್ತಿಲ್ಲ ಎಂದು ವರದಿಗಳು ತಿಳಿಸುತ್ತಿವೆ. ಆರೋಗ್ಯ ಇಲಾಖೆ ಇದರ ಬಗ್ಗೆ ಗಮನ ಹರಿಸಿ ಅತಿ ಶೀಘ್ರವಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ವರ್ಷ ಡೆಂಘೀ ಸೋಂಕು ಹರಡುವಿಕೆ ತೀವ್ರವಾಗಿದೆ ಮತ್ತು ಅದಕ್ಕೆ ತಕ್ಕಂತೆ ಆಡಳಿತ ವ್ಯವಸ್ಥೆಯಿಂದ ಸ್ಪಂದನೆ ಕಾಣಿಸುತ್ತಿಲ್ಲ ಎಂಬುದು ಆತಂಕಕಾರಿ. ಇನ್ನೂ ಡೆಂಘೀ ಸೋಂಕಿನ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ಡೆಂಘೀ ಸೋಂಕಿತರಿಗೆ ಸೂಕ್ತ ಚಿಕಿತ್ಸೆ ಹಾಗೂ ಔಷಧಗಳು ಸಿಗುವಂತೆ ನೋಡಿಕೊಳ್ಳುವುದು, ಪ್ಲೇಟ್ಲೆಟ್ಸ್ ಸರಬರಾಜು, ಸೊಳ್ಳೆಗಳ ನಾಶಕ್ಕೆ ಔಷಧಿ ಮುಂತಾದ ಕ್ರಮಗಳು ಆರೋಗ್ಯ ಇಲಾಖೆ ಆದೇಶ ಹೊರಡಿಸಿ ಸ್ಥಳೀಯ ಆಡಳಿತಗಳ ಮುಖೇನ ಮಾಡಿಸಬೇಕಿದೆ. ಡೆಂಘೀ ಬೆನ್ನಲ್ಲೇ ಇನ್ನು ಚಿಕುನ್‌ಗುನ್ಯಾ ಕೂಡ ಕಾಣಿಸಿಕೊಳ್ಳಬಹುದು ಎಂದು ಅಂದಾಜಿಸಲಾಗಿದೆ. ಅದಕ್ಕೂ ಔಷಧ ಮತ್ತು ಚಿಕಿತ್ಸೆಗೆ ಸಿದ್ಧತೆ ಸರಕಾರ ಮಾಡಿಕೊಂಡಿಲ್ಲ. ಬಡವರು, ಅನಕ್ಷರಸ್ಥರು ಹಾಗೂ ಆರೋಗ್ಯದ ವಿಷಯದಲ್ಲಿ ಸಾಕಷ್ಟು ಮಾಹಿತಿ ಇಲ್ಲದವರು ಇರುವ ಕಡೆ ಸ್ಥಳೀಯ ಆಡಳಿತಗಳು ಹೆಚ್ಚಿನ ಮುತುವರ್ಜಿ ವಹಿಸಿ ಈ ಡೆಂಘೀ ಸೋಂಕನ್ನು ಎದುರಿಸಲು ಜನರನ್ನು ಸಜ್ಜುಗೊಳಿಸುವ ಅಗತ್ಯವಿದೆ.ಪ್ರತಿ ಜಿಲ್ಲೆಗಳಿಂದ ಡೆಂಘೀ ಕುರಿತ ಅಂಕಿಅಂಶಗಳನ್ನು ತರಿಸಿಕೊಂಡು ಆರೋಗ್ಯ ಇಲಾಖೆ ತಕ್ಷಣವೇ ಮುಂದಿನ ಕ್ರಮ ಕೈಗೊಳ್ಳಬೇಕಿದೆ.

-ಡಾ.ವಿಜಯಕುಮಾರ್ ಎಚ್.ಕೆ. ರಾಯಚೂರು

ಲಿಕ್ವಿಡ್ ಪ್ಯಾರಾಫಿನ್ ನಿಷೇಧಿಸಿ

ಸರಕಾರ ಇತ್ತೀಚೆಗೆ ಗೋಬಿ ಮಂಚೂರಿ ಪಾನಿಪುರಿ ಮುಂತಾದ ಆಹಾರಗಳಲ್ಲಿ ಕೃತಕ ಬಣ್ಣಗಳನ್ನು ಉಪಯೋಗಿಸುವುದನ್ನು ನಿಷೇಧಿಸಿ ಆದೇಶ ಹೊರಡಿಸಿರುವುದು ಸ್ವಾಗತಾರ್ಹ. ಎಲ್ಲ ಖಾದ್ಯ ತೈಲಗಳಲ್ಲೂ ಲಿಕ್ವಿಡ್ ಪ್ಯಾರಾಪಿನ್ ಎಂಬ ರಾಸಾಯನಿಕ ಇದೆ ಎಂಬ ಕೂಗು ಕೇಳಿ ಬರುತ್ತಿದ್ದು, ಹೆಚ್ಚಿನ ಗ್ರಾಹಕರು ಮತ್ತೆ ಇತ್ತೀಚಿಗೆ ಗಾಣದ ಎಣ್ಣೆಯ ಮೊರೆ ಹೋಗುತ್ತಿದ್ದಾರೆ. ಈ ಲಿಕ್ವಿಡ್ ಪ್ಯಾರಾಫಿನ್ ಕ್ಯಾನ್ಸರ್‌ಕಾರಕವಾಗಿದ್ದು ಅನೇಕ ಮಾರಕ ರೋಗಗಳಿಗೆ ನಾಂದಿ ಹಾಡುತ್ತದೆ. ಮಾರುಕಟ್ಟೆಯಲ್ಲಿರುವ ಎಲ್ಲಾ ಖಾದ್ಯ ತೈಲಗಳನ್ನು ಪರೀಕ್ಷಿಸಿ ಲಿಕ್ವಿಡ್ ಪ್ಯಾರಾಫಿನ್ ಬೆರೆತಿರುವುದು ಕಂಡು ಬಂದಲ್ಲಿ ಅಂತಹ ಖಾದ್ಯ ತೈಲಗಳನ್ನು ಗ್ರಾಹಕರ ಆರೋಗ್ಯದ ಹಿತ ದೃಷ್ಟಿಯಿಂದ ಸರಕಾರ ನಿಷೇಧಿಸಬೇಕು, ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗುವುದೇ?

-ಡಾ. ಪ್ರಕಾಶ್ ಕೆ ನಾಡಿಗ್ ತುಮಕೂರು